ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 29 ॥ ಸಂಚಿಕೆ : 07॥ UDP/1263/2018-20 || R.NO.50495/91 ॥ ತಾರೀಕು : 12–03–2019 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

# ಎಪ್ರಿಲ್‌ನಲ್ಲಿ ಲೋಕಸಭಾ ಚುನಾವಣೆ

# ಕುಂದಾಪುರ 18 – ಬೈಂದೂರು 23




ಲೋಕಸಭಾ ಚುನಾವಣೆ ಮುಹೂರ್ತ ನಿಗದಿಯಾಗಿದ್ದು ಕರ್ನಾಟಕದಲ್ಲಿ ಎಪ್ರಿಲ್ 18 ಹಾಗೂ 23 ರಂದು ಎರಡು ಹಂತಗಳಲ್ಲಿ ಚುನಾವಣೆ ನಡೆಯಲಿದೆ. ಉಡುಪಿ, ಚಿಕ್ಕಮಗಳೂರು ಕ್ಷೇತ್ರಕ್ಕೆ ಎಪ್ರಿಲ್ 18 ರಂದು ಚುನಾವಣೆ ನಡೆಯಲಿದ್ದು, ಬೈಂದೂರು ಶಿವಮೊಗ್ಗ ಕ್ಷೇತ್ರಕ್ಕೆ ಎಪ್ರಿಲ್ 23 ರಂದು ಚುನಾವಣೆ ನಡೆಯಲಿದೆ. ಹೀಗಾಗಿ ಕರಾವಳಿಯಲ್ಲಿ ಎರಡು ಬೇರೆ ಬೇರೆ ದಿನಗಳಲ್ಲಿ ಚುನಾವಣೆ ನಡೆಯಲಿದೆ.

ಕುಂದಾಪುರ ವಿಧಾನಸಭಾ ಕ್ಷೇತ್ರದಲ್ಲಿ 18ಕ್ಕೆ ಮತದಾನ ನಡೆದರೆ ಬೈಂದೂರು ವಿಧಾನ ಸಭಾ ಕ್ಷೇತ್ರದಲ್ಲಿ 23 ಕ್ಕೆ ಚುನಾವಣೆ ನಡೆಯುತ್ತದೆ.

ಚುನಾವಣೆ ಎಪ್ರಿಲ್ , ಮೇ ತಿಂಗಳಲ್ಲಿ ನಡೆಯುವ ಅಂದಾಜು ಇದ್ದುದರಿಂದ ರಾಜಕೀಯ ಪಕ್ಷಗಳು ಈಗಾಗಲೇ ಕಾರ್ಯಕರ್ತರನ್ನು ಹುರಿದುಂಬಿಸಲು ಸಭೆಗಳನ್ನು ನಡೆಸುತ್ತ ಬಂದಿದ್ದು ಈಗ ದಿನಾಂಕ ಪ್ರಕಟವಾದುದರಿಂದ ಪ್ರಚಾರಕ್ಕೆ ಹೆಚ್ಚಿನ ಬಿರುಸು ಬರಲಿದೆ.

ಮದುವೆ ಸೀಸನ್ ಸಂದರ್ಭದಲ್ಲೇ ಈ ಚುನಾವಣಾ ನೀತಿ ಸಂಹಿತೆ ಜ್ಯಾರಿಯಾಗುತ್ತಿರುವುದರಿಂದ ಸಾರ್ವಜನಿಕರಿಗೂ ಸಮಸ್ಯೆ ಉಂಟಾಗಲಿದೆ. ಕಳೆದ ಬಾರಿ ಚಿನ್ನಾಭರಣ, ವಸ್ತ್ರಖರೀದಿ ಮಾಡಿ ತಮ್ಮ ಕಾರುಗಳಲ್ಲಿ ಸಾಗಿಸುವಾಗಲೂ ಹಲವರು ತಪಾಸಣೆಗೊಳಗಾಗಿ ಪಚೀತಿ ಅನುಭವಿಸಿದ್ದರು.

ಬಹುತೇಕ ಸರಕಾರಿ ಯೋಜನೆಗಳ ಕಾಮಗಾರಿ ಅಂತಿಮವಾಗಿ ಮಾರ್ಚ್ ತಿಂಗಳಲ್ಲಿ ಪೂರ್ಣಗೊಳ್ಳುವುದರಿಂದ ನೀತಿ ಸಂಹಿತಿ ಕಾಮಗಾರಿಗೂ ಅಡ್ಡಿಯಾಗಬಹುದು. ಆ ಮೂಲಕ ಗುತ್ತಿಗೆದಾರರಿಗೂ ಬಿಲ್ ಮೊತ್ತ ಪಡೆಯುವ ಸಮಸ್ಯೆ ಉಂಟಾಗಬಹುದು.

ಬೈಂದೂರು – ಕುಂದಾಪುರ ಕ್ಷೇತ್ರಗಳಲ್ಲಿ ಪ್ರತ್ಯೇಕ ದಿನಗಳಲ್ಲಿ ಚುನಾವಣೆ ನಡೆಯುವುದು ಬಾರ್ ಮಾಲಕರಿಗೂ ಸಮಸ್ಯೆ ಉಂಟಾಗುವ ಸಾಧ್ಯತೆ ಇದೆ. ಚುನಾವಣೆ ಹತ್ತಿರದ ಗ್ರಾಮದಲ್ಲೇ ನಡೆಯುತ್ತಿರುವುದರಿಂದ ಬಾರ್‌ಗಳನ್ನು ಬಂದ್ ಮಾಡಲಾಗುತ್ತದೆ. ಹೋಟೇಲ್ ಬಾರ್ ಎರಡೂ ಹೊಂದಿದವರಿಗೆ ಇನ್ನೂ ನಷ್ಟ.




ಬೈಂದೂರು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಬಿ.ವೈ. ರಾಘವೇಂದ್ರ ಸ್ಪರ್ಧೆ ಅಂತಿಮವಾಗಿದೆ. ಹಾಲಿ ಸದಸ್ಯರಿಗೆ ಟಿಕೇಟು ನೀಡುವ ನಿರ್ಧಾರವಾದರೆ ಶೋಭಾ ಕರಂದ್ಲಾಜೆಯವರೂ ಮತ್ತೆ ಸ್ಪರ್ಧಿಸುವ ಅವಕಾಶ ಪಡೆಯುತ್ತಾರೆ. ಆದರೆ ಕಾಂಗ್ರೆಸ್ –ಜೆಡಿಎಸ್ ಅಭ್ಯರ್ಥಿ ಯಾರು ಎನ್ನುವ ಬಗ್ಗೆ ಇನ್ನೂ ಅಂತಿಮ ನಿರ್ಣಯವಾಗಿಲ್ಲ.

ಕರಾವಳಿಯ ಬಹುತೇಕ ವಿಧಾನ ಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿರುವ ಬಿಜೆಪಿಗೆ ಈ ಚುನಾವಣೆ ಸವಾಲಾಗಿದೆ. ಕಾಂಗ್ರೆಸ್‌ಗೆ ತನ್ನ ಪಕ್ಷ ಮತ್ತೆ ಗೆಲುವಿನ ಹಾದಿಗೆ ತಲುಪಿಸುವ ಕಠಿಣ ಪರೀಕ್ಷೆಯಾಗಿದೆ.

ಬಿಜೆಪಿ "ಮೋದಿ"ಯವರ ಹೆಸರನ್ನೇ ಈ ಬಾರಿಯೂ ಚುನಾವಣಾ ಪ್ರಚಾರದ ಪ್ರಮುಖ ಅಸ್ತ್ರವನ್ನಾಗಿ ರೂಪಿಸಬಹುದು. ಕಾಂಗ್ರೆಸ್ ರಾಹುಲ್ ಗಾಂಧಿಯವರನ್ನು ಪ್ರಧಾನಿ ಮಾಡುವ ಪ್ರಚಾರ ಕೈಗೊಳ್ಳಬಹುದು.

## ಹುಡುಗೋಡು ಚಂದ್ರಹಾಸ ರಂಗದಲ್ಲೇ ನಿಧನ





ಬೈಂದೂರಿನ ಬಳಿ ಯಳಜಿತ್ ಗ್ರಾಮದಲ್ಲಿ ಯಕ್ಷಗಾನ ಕಾರ್ಯಕ್ರಮದಲ್ಲಿ ಬಡಗು ತಿಟ್ಟಿನ ಪ್ರಖ್ಯಾತ ಕಲಾವಿದ ಹುಡುಗೋಡು ಚಂದ್ರಹಾಸ ಅವರು ವೇದಿಕೆಯಲ್ಲೇ ಕುಸಿದು ವಿಧಿವಶರಾದ ಘಟನೆ ಭಾನುವಾರ ರಾತ್ರಿ ನಡೆದಿದೆ.

ಭೀಷ್ಮ ವಿಜಯ ಪ್ರಸಂಗದಲ್ಲಿ ಸಾಲ್ವನ ಪಾತ್ರ ನಿರ್ವಹಿಸಿದ ಹುಡುಗೋಡು ಚಂದ್ರಹಾಸ ಅವರು ಭೀಷ್ಮ ಎನ್ನುವ ಉದ್ಗಾರ ಮಾಡುತ್ತಲೇ ವೇದಿಕೆಯಲ್ಲಿ ಹೃದಯಾಘಾತವಾಗಿ ಕುಸಿದು ಬಿದಿದ್ದಾರೆ. ಕುಸಿದು ಬಿದ್ದ ಅವರನ್ನು ತಕ್ಷಣ ಸಹಕಲಾವಿದರು ಮತ್ತು ಸ್ಥಳದಲ್ಲಿದ್ದವರು ಮೇಲಕ್ಕೆತ್ತಿದರು. ಆದರೆ ಅದಾಗಲೇ ಕಲಾಮಾತೆಯ ಮಡಿಲನ್ನು ಅವರು ಸೇರಿ ಆಗಿತ್ತು.

ಕಲಾಧರ ಬಳಗ ಹೊನ್ನಾವರ ತಂಡದ ಯಕ್ಷಗಾನ ಕಾರ್ಯಕ್ರಮದಲ್ಲಿ ಅತಿಥಿ ಕಲಾವಿದರಾಗಿ ಆಗಮಿಸಿದ್ದ ಹುಡುಗೋಡು ಅವರು ಬಹುಜನರ ಅಪೇಕ್ಷೆ ಮೇರೆಗೆ ಸಾಲ್ವನಾಗಿ ಅಭಿನಯಿಸುತ್ತಿದ್ದರು. ಸಾಲ್ವ ಪಾತ್ರದ ಮೂಲಕ ಅವರು ಅಪಾರ ಅಭಿಮಾನಿಗಳನ್ನು ಸಂಪಾದಿಸಿದ್ದರು. ಪ್ರಖ್ಯಾತ ಕಲಾವಿದ್ದರಾಗಿದ್ದ ಅವರು ಡೇರೆ ಮೇಳಗಳಾಗಿದ್ದ ಸಾಲಿಗ್ರಾಮ, ಪೆರ್ಡೂರು ಮೇಳಗಳಲ್ಲಿ ದಶಕಗಳ ಕಾಲ ತಿರುಗಾಟ ಮಾಡಿ ತನ್ನದೇ ಆದ ಛಾಪು ಮೂಡಿಸಿದ್ದರು.

ಸಾಲ್ವ ಭೀಮ,ಕೌರವ, ಹನುಮಂತ, ಕೀಚಕ ಹೀಗೆ ಹಲವು ವೇಷಗಳಲ್ಲಿ ತನ್ನದೇ ಆದ ಪ್ರತಿಭೆ ಮೆರೆದು ಖ್ಯಾತರಾಗಿದ್ದರು. ರಾಜಕೀಯ ರಂಗಕ್ಕೆ ಕಾಲಿರಿಸಿದ್ದ ಅವರು ಉ.ಕ. ಹಡಿನಬಾಳ ಗ್ರಾ.ಪಂ. ಅಧ್ಯಕ್ಷರಾಗಿದ್ದರು.




